

# ಡಿ ವಾಲ್ಲೆನ್

## ಆಮ್‌ಸ್ಟರ್‌ಡ್ಯಾಂನ ಕೆಂಪು ದೀಪದ ಬೀದಿಯಲ್ಲಿ...

**ಮುಂಬೈಯ ಕಾಮಾಟಿಪುರ, ಕೋಲ್ಕತ್ತದ ಸೋನಾಗಾಚಿಯಂತೆಯೇ ಆಮ್‌ಸ್ಟರ್‌ಡ್ಯಾಂನಲ್ಲಿ 'ರೆಡ್ ಲೈಟ್ ಡಿಸ್ಟ್ರಿಕ್ಟ್' ಎಂದೇ ಕರೆಸಿಕೊಂಡಿದೆ 'ಡಿ ವಾಲ್ಲೆನ್'. ಮೋಟು ಗೋಡೆ, ಕಿಟಕಿಗಳ ಸ್ಯಾಟಿನ್ ಪರದೆ, ಕೆಂಪು ದೀಪಗಳ ಹಿಂದೆ ಹೆಣ್ಣುಮಕ್ಕಳು ನಿಂತು ಕಿಟಕಿ ವ್ಯಾಪಾರ ಕುದುರಿಸುವ ದೃಶ್ಯಗಳು ನಿಟ್ಟುಸಿರನ್ನು ಉಳಿಸಿಬಿಡುತ್ತವೆ.**

■ **ವಸಂತ ಕಲ್‌ಬಾಗಲ್**

'ವ್ಯಾನ್ ಗೋ'ನಂತಹ ಕಲಾವಿದನ ಬೀಡು, ಟ್ಯುಲಿಪ್ ಹೂಗಳ ನಾಡು, ಚೀಸ್, ಬೂಟ್ಸ್, ವಿಂಡ್ ಮಿಲ್‌ಗಳ ನೆಲೆವೀಡಾದ ಡಚ್ ಪಟ್ಟಣ ಆಮ್‌ಸ್ಟರ್‌ಡ್ಯಾಂನ ಪ್ರೇಕ್ಷಣೀಯ ಸ್ಥಳಗಳನ್ನು ಕ್ರಮ ಪ್ರಕಾರ ನೋಡಿದ ಮೇಲೆ, ನಮ್ಮಷ್ಟಕ್ಕೇ ಮೂರು ಗಂಟೆ ಕಾಲ ಅಡ್ಡಾಡಿಕೊಂಡು ಬರಲು ನಾವು ಹಲವರು ಹೊರಟೆವು.

ಆಮ್‌ಸ್ಟರ್‌ಡ್ಯಾಂನ ಮುಖ್ಯ ಜಾಗ, 'ಡಚ್ ರಾಯಲ್ ಪ್ಯಾಲೇಸ್' ಇರುವ ದೊಡ್ಡ ಚೌಕಕ್ಕೆ ನಡೆದುಬಂದೆವು. ನಮ್ಮ ಮೈಸೂರು ಹಾಗೂ ಜೈಪುರದ ಅರಮನೆಗಳನ್ನು ನೋಡಿದವರಿಗೆ ಅಲಂಕೃತ ಗೋಪುರ, ಕಮಾನು, ಚೆನ್ನದ ಬಣ್ಣ, ವಿನ್ಯಾಸಗಳನ್ನು ಕಾಣದೆ ಪ್ಯಾಲೇಸ್ ಎಲ್ಲಿದೆ ಎಂದೇ ಗುರುತಿಸಲು ಸಾಧ್ಯವಿಲ್ಲ. ಅಂತಹ ನಿರ್ಮೋಹಕ ಕಟ್ಟಡಗಳು. 'ಮ್ಯಾಡಮ್ ಟುಸ್ಸಾಡ್ಸ್ ವ್ಯಾಕ್ಸ್ ಮ್ಯೂಸಿಯಂ' ಸಹ ಇಲ್ಲೇ ಇತ್ತು.

ನಮಗೆ ಇನ್ನೂ ಎರಡು ಗಂಟೆಯ ಅವಧಿ ಇತ್ತು. ಹಾಗಾಗಿ ಹೊಸದೇನಾದರೂ ನೋಡುವ ಎಂದು ಸಮಾಲೋಚಿಸಿದೆವು. ನಮ್ಮ ಪ್ರವಾಸಿ ಮಾರ್ಗದರ್ಶಿ ಮಾತಿನ ಮಧ್ಯೆ, ನಿಮ್ಮಲ್ಲಿ ಯಾರಾದರೂ 'ರೆಡ್ ಲೈಟ್ ಡಿಸ್ಟ್ರಿಕ್ಟ್' ನೋಡಬೇಕೆಂದರೆ, ಹಾಗೆಯೇ ಮುಂದೆ ಹೋಗಿ ಎಡಕ್ಕೆ ತಿರುಗಿ ಮತ್ತೆ ಬಲಕ್ಕೆ ತಿರುಗಿದರೆ ಸಿಗುತ್ತದೆ ಎಂದು ಹೇಳಿದ್ದು ನೆನಪಾಯಿತು. ನಮ್ಮ ದೇಶದಲ್ಲಿ ಕೆಂಪು ದೀಪದ ಜಾಗಗಳಾದ ಮುಂಬೈಯ ಕಾಮಾಟಿಪುರವನ್ನಾಗಲೀ, ಕೋಲ್ಕತ್ತದ ಸೋನಾಗಾಚಿಯನ್ನಾಗಲೀ ನೋಡಿಲ್ಲದಿರುವಾಗ, ಆಮ್‌ಸ್ಟರ್‌ಡ್ಯಾಂನಲ್ಲಿ ಈ ದೃಶ್ಯ ನೋಡುವ ಕುತೂಹಲ ಎಲ್ಲರಲ್ಲೂ ಮೂಡಿತು. ನಮ್ಮ ಪೈಕಿ ಮೂವರು ಮಹಿಳೆಯರು, ಮೂವರು ಪುರುಷರು, ಇಬ್ಬರು ಯುವತಿಯರಿದ್ದರು. ನೋಡೇ ಬಿಡೋಣ ಎಂದು ಹೊರಟೆವು.

ಈ ಊರಿಗೆ 'ಆಮ್‌ಸ್ಟೆಲ್‌ರೆ–ಡ್ಯಾಂ' ಎಂದೇ ಹೆಸರು. 12ನೇ ಶತಮಾನದಲ್ಲಿ ದಕ್ಷಿಣ ಹಾಲೆಂಡ್‌ನ ಬೆಸ್ತರು, ಹಳ್ಳಿಯನ್ನು ನೆರೆಯಿಂದ ಕಾಪಾಡಲು ಅಣೆಕಟ್ಟು ಕಟ್ಟಿದರು. ಹಾಗಾಗಿ ಅದನ್ನು 'ಆಮ್‌ಸ್ಟೆಲ್ ನದಿಯ ಮೇಲಿನ ಡ್ಯಾಂ ಊರು' ಎಂದು ಕರೆದರು. ಕ್ರಮೇಣ, 'ಆಮ್‌ಸ್ಟರ್‌ಡ್ಯಾಂ' ಆಯಿತು. ಪಟ್ಟಣದ ಮಧ್ಯದಲ್ಲೇ ಇದ್ದ ಅಲಂಕೃತ